# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

## ದ್ವಿತೀಯ ಪಿಯುಸಿ ಪರೀಕ್ಷೆ-1 - ಮಾರ್ಚ್ 2025

**ವಿಷಯ: 16- ಐಚ್ಛಿಕ ಕನ್ನಡ** **ಕೀಲಿ ಉತ್ತರಗಳು** **ಗರಿಷ್ಠ ಅಂಕಗಳು : 80**

| ಪ್ರಶ್ನೆ ಸಂಖ್ಯೆ | | ಅಂಕಗಳು |
|---|---|---|
| | **ಅ-ವಿಭಾಗ** | |
| **I** | | **5X1=5** |
| 01 | ಅ. ಆಯಸ್ಸಿನ ಅಂತ್ಯದಿಂದ | 1 |
| 02 | ಈ. ಚಿಂತೆ | 1 |
| 03 | ಆ. ತೇರು | 1 |
| 04 | ಇ. ಬಡವರು | 1 |
| 05 | ಈ. ಪ್ರಾಮಾಣಿಕವಾಗಿ ಕಾಯಕ ಮಾಡುತ್ತಾ ಅಸಹಾಯಕರ ಸೇವೆ ಮಾಡುವವರು | 1 |
| **II** | | **5X1=5** |
| 06 | ಪ್ರೀತಿ | 1 |
| 07 | ಸೊಗ | 1 |
| 08 | ಒಳಗಣ | 1 |
| 09 | ಓಡೋಡಿ | 1 |
| 10 | ಇತರ+ಇತರ | 1 |
| **III** | | **5X1=5** |
| 11 | ಅ. ವಸ್ತ್ರ | 1 |
| | ಆ. ನೇಸರ, ರವಿ | 1 |
| | ಇ. ರಾಜ, ಹುಡುಕು | 1 |
| | ಈ. ನಿರಾಧಾರ | 1 |
| | ಉ. ವಿದ್ಯೆ | 1 |
| **IV** | | **5X1=5** |
| 12 | ಗುಂಡಯ್ಯನ ಕಾಯಕ | 1 |
| 13 | ಮತ್ತೊಂದು ಫಲವ ಬಯಸಬಾರದು | 1 |
| 14 | ಕೊಲ್ಲುವುದು ಧರ್ಮವಲ್ಲ | 1 |
| 15 | ಪೊರಕೆ | 1 |
| 16 | ಶಿವ | 1 |

| ಆ-ವಿಭಾಗ | | |
|---|---|---|
| V | | 4X2=8 |
| 17 | ಹಬ್ಬಿದ ಭೋಗ | 2 |
| 18 | ಪಡ್ಡಳಿ – ಬಂದುಗೆ - ಕಕ್ಕೆ – ಮುತ್ತ – ಪಾದರಿ | 2 |
| 19 | ಗುಂಡನ ಹೃದಯದಲ್ಲಾಡುತ್ತಿದ್ದೆ – ತಂಡದ ಸುಖದಲ್ಲಿದ್ದೆ – ಸಲ್ಲೀಲೆಯಲ್ಲಿ ಮರೆತಿದ್ದೆ – ಅಲಿ ಇಲಿ ಮೂಡುತಿದೆ | 2 |
| 20 | ಸ್ಪರ್ಶಮಣಿಯ ಸ್ಪರ್ಶಕ್ಕೆ ಕಬ್ಬಿಣ ಕನಕವಾದಂತೆ ಹಳೆ ಹಂಚು ಹೊನ್ನಾಗುವುದಿಲ್ಲ - ಚಂಚಲೆಯಾದ ಮಾಯೆ ಯಾವುದರ ಸಾಂಗತ್ಯದಿಂದಲೂ ಸ್ಥಿರಳಾಗುವುದಿಲ್ಲ. | 2 |
| 21 | ಆಡಿ ಮಾಡುವನು ಮಧ್ಯಮ – ಆಡಿಯೂ ಮಾಡದವನು ಅಧಮ | 2 |
| VI | | 4X3=12 |
| 22 | **ಆಯ್ಕೆ** : ಪಂಪ – ಪೊಸಯಿಸಿದಳಾಕೆ ನಾಟ್ಯಾಗಮಮಂ | 1 |
| | **ಸಂದರ್ಭ**: ನೀಲಾಂಜನೆಯ ಅಂತ್ಯ – ಇಂದ್ರನಿಂದ ಯಂತ್ರನಾರಿ ಸೃಷ್ಟಿ – ಅನಿತ್ಯವಾದ ದೇಹದ ನಶ್ವರತೆಯನ್ನು ಕಂಡ ಆದಿದೇವನ ಮನದಲ್ಲುಂಟಾದ ಭಾವನೆ. | 1 |
| | **ಸ್ವಾರಸ್ಯ**: ಮಿಂಚಿನಂತೆ ಮಾಯವಾಗುವ ಲೌಕಿಕ ಮೋಹಕ್ಕೆ ಲೋಕವು ಒಳಗಾಗಿರುವುದರ ಬಗೆಗೆ ಆದಿದೇವನಿಗೆ ಉಂಟಾದ ಅರಿವು. | 1 |
| 23 | **ಆಯ್ಕೆ**: ಷಡಕ್ಷರದೇವ – ಸೌಜನ್ಯ ವಿದೂರನಾದೆನ್ | 1 |
| | **ಸಂದರ್ಭ**: ಯುದ್ಧದಲ್ಲಿ ಸೋತ ಅರ್ಜುನನ ಪಶ್ಚಾತ್ತಾಪ | 1 |
| | **ಸ್ವಾರಸ್ಯ**: ಶಕ್ತಿ ಮತ್ತು ವಿದ್ಯೆಯ ಜೊತೆಗೆ ವಿನಯದ ಅಗತ್ಯತೆ | 1 |
| 24 | **ಆಯ್ಕೆ** : ಹರಿಹರ – ಆಡಿದನಾಡಿದನಾಹಾ ಶಂಕರ | 1 |
| | **ಸಂದರ್ಭ** : ಮೈಮರೆತ ಶಿವನನ್ನು ಪಾರ್ವತಿ ಪ್ರಶ್ನೆ ಮಾಡಿದ ಸಂದರ್ಭ. | 1 |
| | **ಸ್ವಾರಸ್ಯ**: ಸರಳ ಭಕ್ತಿಗೆ ದೇವನೊಲಿಯುವ ರೀತಿ ಹಾಗೂ ಕಾಯಕ ನಿಷ್ಠೆ. | 1 |
| 25 | **ಆಯ್ಕೆ** : ಸರ್ವಜ್ಞ – ಹಸನಾಗಿ ದುಡಿದರೆ ಅಶನ ವಸನಗಳು | 1 |
| | **ಸಂದರ್ಭ**: ಜಾತಿ, ಧರ್ಮ, ವರ್ಗಗಳಾಚೆ ಎಲ್ಲರೂ ನಮ್ಮವರೇ ಎಂದು ಹೇಳುವ ಭಾವದ ಸಂದರ್ಭ. | 1 |
| | **ಸ್ವಾರಸ್ಯ** : ಎಲ್ಲರೊಳು ಒಂದಾಗುವ ಭಾವ. | 1 |
| 26 | **ಆಯ್ಕೆ** : ಸಂಚಿಯ ಹೊನ್ನಮ್ಮ – ನೇಮದೊಳು ನೆಲೆಸುವುದು | 1 |
| | **ಸಂದರ್ಭ** : ಹೆಣ್ಣಿನ ಹುಟ್ಟಿನ ಬಗೆಗೆ ಅಸಹನೆ ಹೊಂದಿರುವ ಸಮಾಜದ ವಿಡಂಬನೆಯ ಸಂದರ್ಭ. | 1 |
| | **ಸ್ವಾರಸ್ಯ** : ಲಿಂಗ ಸಮಾನತೆಯ ಅರಿವನ್ನು ಲೋಕ ಪಡೆಯಬೇಕಾದ ಅಗತ್ಯ. | 1 |

| | | |
|---|---|---|
| **VII** | | **2X4=8** |
| 27 | ಆದಿದೇವನ ಮನಸ್ಸಂತೋಷಕ್ಕಾಗಿ ಇಂದ್ರನಿಂದ ಸಂಗೀತ ಸಭೆ - ನೀಳಾಂಜನೆಯ ನೃತ್ಯ ಪ್ರಸಂಗ ಮತ್ತು ನೀಳಾಂಜನೆಯ ಅಕಾಲಿಕ ಮರಣ - ಸಭಾ ರಸಭಂಗವನ್ನು ತಪ್ಪಿಸಲು ಇಂದ್ರನಿಂದ ನಾರೀಯಂತ್ರದ ಸೃಷ್ಟಿ. ಇದನ್ನು ಕಂಡ ಆದಿದೇವನ ವೈರಾಗ್ಯ - ಮಿಂಚಿನಂತೆ ಮಾಯವಾಗುವ ಲೌಕಿಕದ ಬಗೆಗೆ ಆದಿದೇವನಲ್ಲಾದ [illegible] | 4 |
| 28 | ಕಾಮರೂಪಿಯಾದ ಮಾಯೆ ಅಲ್ಲಮನನ್ನು ಬಯಸಿದ್ದು - ವಿಮಳೆ ಅಲ್ಲಮನಲ್ಲಿ ಮಾಯೆಯ ಪ್ರೀತಿಯ ಬಗೆಗೆ ನಿವೇದಿಸುವುದು - ಆಸೆ ಆಮಿಷಗಳನ್ನು ಮೀರಿದ ಅಲಮನ ಆಧ್ಯಾತ್ಮ ಕುರಿತ ಚಿಂತನೆ. | 4 |
| 29 | ಆಪತ್ತಿನಲ್ಲಿ ಧೈರ್ಯ, ಅಭ್ಯುದಯದಲ್ಲಿ ಕ್ಷಮೆ, ಕೋಪದಲ್ಲಿ ತಿಳುವಳಿಕೆ, ಸಿರಿಗೆ ಉದಾರತೆ, ವಿದ್ಯೆಗೆ ವಿನಯ, ಬಾಳಿಗೆ ಪರಹಿತ - ಕೊಲ್ಲುವುದು ಧರ್ಮವಲ್ಲ, ಕಳುವುದು ನೀತಿ ಅಲ್ಲ, ಸಜ್ಜನರ ಗೆಲ್ಲುವುದು ಒಳಿತಲ್ಲ, ಪರಸತಿಗೆ ಒಲಿಯುವುದು ಪರಿಯಲ್ಲ - ಮುನಿಸು, ದ್ರೋಹ, ಜಡತ್ವಗಳ ತೊರೆಯುವುದರ ವಿವರಣೆ. | 4 |
| 30 | ಇಹಪರ ಸೌಖ್ಯಕ್ಕಾಗಿ ಹೆಣ್ಣಿನ ಅಗತ್ಯ - ಹೆಣ್ಣು ನಮ್ಮನೆಲ್ಲ ಪಡೆದ ತಾಯಿ ಮತ್ತು ಪೊರೆಯುವವಳು - ಕುವರನಾದ ಮಾತ್ರಕ್ಕೆ ಬರುವ ಭಾಗ್ಯವೇನೂ ಇಲ್ಲ. ಕುವರಿಯಾದ ಮಾತ್ರಕ್ಕೆ ಬರುವ ಕುಂದೇನೂ ಇಲ್ಲ. ಇವರಿಬ್ಬರ ಸಮಾನ ಏಳ್ಗೆಯಿಂದ ಇಹ ಮತ್ತು ಪರ ಸುಖಗಳು ಲಭಿಸುವವು - ಕುಲಪುತ್ರನು ಓದಿ ತಿಳಿದು ನಡೆದರೆ ಮಾತ್ರ ಕುಲವನ್ನು ಉದ್ಧರಿಸಲು ಅರಿಯುವನು. ಆದರೆ ಕುಲಪುತ್ರಿಯು ವರನೊಬ್ಬನಿಗೆ ಕೊಟ್ಟ ಮಾತ್ರದಿಂದಲೇ ಕುಲಕೋಟಿಯನ್ನು ಉದ್ಧರಿಸುವ ಹೊಣೆಯನ್ನು ಅರಿತವಳು - ಸಮಾಜವು ಹೆಣ್ಣು-ಗಂಡುಗಳ ನಡುವೆ ಹೊಂದಿರುವ ತಾರತಮ್ಯ ಭಾವನೆಯಿಂದ ಬಿಡುಗಡೆ ಹೊಂದಿ ಹೆಣ್ಣನ್ನು ಸಮಾನತೆಯಿಂದ, | 4 |
| **VIII** | | **1X4=4** |
| 31 | **ಆಯ್ಕೆ :** ಷಡಕ್ಷರದೇವ – ಸೌಜನ್ಯ ವಿದೂರನಾದೆನ್ | 1 |
| | **ಸಂದರ್ಭ :** ಕಿರಾತನೊಡನೆ ಯುದ್ಧದಲ್ಲಿ ಸೋತ ಅರ್ಜುನನಿಂದ ಲಿಂಗಪೂಜೆ – ಅರ್ಜುನ ಅರ್ಪಿಸಿದ ಹೂವು ಕಿರಾತನ ಮಂಡೆಯಲ್ಲಿ. | 1 |
| | **ಭಾವಾರ್ಥ :** ಅರ್ಜುನನ ಪಶ್ಚಾತ್ತಾಪ, ಲಿಂಗಪೂಜೆ - ಹೂಗಳು ಕಿರಾತನ ಮಂಡೆಯಲ್ಲಿ, ಅರ್ಜುನನಿಗಾದ ಆಶ್ಚರ್ಯ, ಕಿರಾತನೇ ಶಿವ – ಸೌಜನ್ಯವಿಲ್ಲದ ವಿದ್ಯೆ ನಿರರ್ಥಕ. | 2 |
| 32 | **ಆಯ್ಕೆ :** ಸರ್ವಜ್ಞ – ಹಸನಾಗಿ ದುಡಿದರೆ ಅಶನ ವಸನಗಳು | 1 |
| | **ಸಂದರ್ಭ :** ಸಿಂದಿಯನ್ನು ಸೇವಿಸುವ ಕುಡುಕನು ಹಂದಿಗಿಂತಲೂ ಕಡೆಯಾಗುವನು ಎಂಬುದರ ವಿವರಣೆ | 1 |

| | | |
|---|---|---|
| | **ಭಾವಾರ್ಥ**: ವ್ಯಸನಗಳು ಮನುಷ್ಯರ ವ್ಯಕ್ತಿತ್ವವನ್ನು ನಾಶ ಮಾಡುತ್ತವೆ ಎಂಬ ಚಿಂತನೆ. ವ್ಯಸನಕ್ಕೆ ಒಳಗಾದವರು ಪ್ರಾಣಿಗಳಿಗಿಂತಲೂ ಕೀಳುಮಟ್ಟದಲ್ಲಿರುತ್ತಾರೆ ಎಂಬ ತತ್ವ. | 2 |
| **ಇ-ವಿಭಾಗ** | | |
| **IX** | | **1X2=2** |
| **33** | ಬಳುಕಿ ಸಾಗಿ ಬರುವ ನಾಗಿಯನ್ನು ನೋಡಿ ಕರುವು ನಾಚಿತು. | **2** |
| **34** | ‘ಸೀರೆ ಬೇಕೆ ಸೀರೆ’ ನಿಮಗೆ ಬನ್ನಿರೊಂದು ಬಾರಿಗೆ – ಹಸಿರು ಸೀರೆ, ನೀಲ ಸೀರೆ, ಜರಿಯ ಸೆರಗು ಸೀರೆಯು – ಉಟ್ಟು ನೋಡಿ, ತೊಟ್ಟು ನೋಡಿ, ಹಸೆಯ ಮೆರಗು ಸೀರೆಯು. | **2** |
| **X** | | **1X4=4** |
| **35** | ಊರಿಗೆಲ್ಲ ದೊಡ್ಡ ಸಂಭ್ರಮವಾದ ತೇರು – ಬೇಗ ಮಿಂದ ನಾಗಿ, ಹಸಿರು ಸೀರೆ, ಇಂದ್ರಧನುವಿನಂತ ರವಿಕೆ ತೊಟ್ಟ ನಾಗಿ - ಬಳುಕಿ ನಡೆವ ನಾಗಿಯನ್ನು ಕಂಡ ಕರು ನಾಚಿದ್ದು – ಹಿಗ್ಗು ತುಂಬಿ ಹಸುವು ಎದ್ದು ಕೆಚ್ಚಲನ್ನು ಚಾಚಿದ್ದು – ಮಡಕೆ ತುಂಬ ಹಾಲು ಕರೆದು ಕೊಟ್ಟ ನಾಗಿ ‘ತೇರ ನೋಡಿ ಬರುವ ಬಾರೆ’ ಎಂದು ಆಸೆಪಟ್ಟದ್ದು - ತಾಯಿ ಮಗಳು ಮನೆಯ ದಾಟಿ ತೇರಿಗೆ ನಡೆಯುತಿರುವಾಗ ಕೊಕ್ಕರೆಗಳು ನೀರಿಗೆ ಇಳಿಯುತ್ತಿದ್ದವು – ತಾಯ ಜೊತೆಗೆ ನಡೆವ ನಾಗಿ ಬೆಕ್ಕು ನೋಡಿ ನಿಂತ ನಾಗಿ – ಸೀರೆಯವನು ಕೂಗುತ್ತಿದ್ದ ಸಂದರ್ಭ - ತೇರಿನ ಹಾದಿ – | **4** |
| **36** | ತೇರಿಗೆ ಹೊರಟ ನಾಗಿ – ಬೆಕ್ಕಿನ ಸಾಂಗತ್ಯ - ಬೆಕ್ಕು ಮತ್ತು ಸೀರೆಯವನ ಆಕರ್ಷಣೆಗೆ ಒಳಗಾದ ನಾಗಿ – ಪ್ರೀತಿಯ ಸೆಳೆತಕ್ಕೆ ಹಾದಿ ತಪ್ಪಿದ ದುರಂತ - ಪ್ರೀತಿಯ ಸೋಲು ಗೆಲುವುಗಳಲ್ಲಿ ಹೆಣ್ಣು-ಗಂಡು ಇಬ್ಬರೂ ಸಮಭಾಗಿಗಳಾಗಿರುತ್ತಾರೆ | **4** |
| **ಈ-ವಿಭಾಗ** | | |
| **XI** | | **2X2=4** |
| **37** | ಮಣ್ಣಿನಲ್ಲಿ, ಕೊಳೆತ ಕಸದಲ್ಲಿ | **2** |
| **38** | ಕೊನೆ ದೊರೆ ಕೊರಳಿಗೆ ಕೊನೆ ಪುರೋಹಿತನ ಕರುಳು ಉರುಳಾಗುವವರೆಗೆ ಸುಖವಿಲ | **2** |
| **39** | ದಕ್ಷಿಣೆ, ಹಣ್ಣು ಕಾಯಿಯ ದುಡ್ಡು, ತೀರ್ಥ ಮಾರಿದ ದುಡ್ಡು. | **2** |

| XII | | 2X3=6 |
|---|---|---|
| 40 | **ಆಯ್ಕೆ :** ಕುವೆಂಪು – ಜಲಗಾರ | 1 |
| | **ಸಂದರ್ಭ :** ರೈತ ಜಲಗಾರನನ್ನು ಜಾತ್ರೆಗೆ ಆಹ್ವಾನಿಸಿದಾಗ ಗುಡಿಗೆ ಸೇರಿಸರು ನನ್ನ ಎಂದ ಜಲಗಾರನ ಮಾತಿಗೆ ರೈತನು ಹೇಳಿದ ಮಾತು. | 1 |
| | **ಸ್ವಾರಸ್ಯ :** ಗುಡಿಯಲ್ಲಿ ದೇವರನ್ನು ಕಾಣಲು ಪ್ರಯತ್ನಿಸುವ ರೈತ, ಕಾಯಕನಿರತ ಜಲಗಾರ. | 1 |
| 41 | **ಆಯ್ಕೆ :** ಕುವೆಂಪು – ಜಲಗಾರ | 1 |
| | **ಸಂದರ್ಭ :** ಹಾಡಿದವನು ಜಲಗಾರನೆಂದು ತಿಳಿಯುವ ಮೊದಲು ಅವನ ಹಾಡನ್ನು ಮೆಚ್ಚಿದ ಪಾರ್ವರು ಅನಂತರ ಹಾಡು ಜಲಗಾರನದ್ದೆಂದು ತಿಳಿದಾಗ ಪ್ರತಿಕ್ರಿಯಿಸುವ ಸಂದರ್ಭ | 1 |
| | **ಸ್ವಾರಸ್ಯ :** ಕಲೆ, ಪ್ರತಿಭೆಗಳು ಉಳ್ಳವರ ಮತ್ತು ಮೇಲ್ವರ್ಗದವರ ಸ್ವತ್ತು ಎಂಬ ಪಾರ್ವರ ನಿಲುವು | 1 |
| 42 | **ಆಯ್ಕೆ :** ಕುವೆಂಪು – ಜಲಗಾರ | |
| | **ಸಂದರ್ಭ :** ಕಾಯಕದಲ್ಲಿ ದೇವರನ್ನು ಕಂಡ ಜಲಗಾರನನ್ನು ಶಿವ ಮೆಚ್ಚಿದ ಸಂದರ್ಭ | 1 |
| | **ಸ್ವಾರಸ್ಯ :** ಜಾತಿ ಅಂತಸ್ತುಗಳ ಗಡಿ ಮೀರದ ಪ್ರಾಮಾಣಿಕ ಕಾಯಕದ ಮೂಲದ ಭಕ್ತಿ ಮತ್ತು ಕಾಯಕಕ್ಕೆ ಒಲಿಯುವ ದೇವರು | 1 |
| XIII | | 1X4=4 |
| 43 | ಕಾಯಕನಿರತ ಜಲಗಾರ – ಶಿವಗುಡಿಗೆ ಆಹ್ವಾನಿಸಿದ ರೈತ - ಶಿವಗುಡಿಗೆ ಸೇರಿಸರು ಎನ್ನುವ ಜಲಗಾರ – ದೂರದಿಂದಲೇ ಕೈಮುಗಿದು ಬಾ ಎನ್ನುವ ರೈತ - ಕರ್ಮವಾರಾಧನೆ ಸೇವೆಯೇ ಪೂಜೆ ಎನ್ನುವ ತತ್ವದ ಮೂಲಕ ಮಣ್ಣಿನಲ್ಲಿ ಕೊಳೆತ ಕಸದಲ್ಲಿ ಶಿವನನ್ನು ಕಾಣುವ ಜಲಗಾರನ ಕಾಯಕ ಮೂಲದ ಭಕ್ತಿ | 4 |
| 44 | ಕಾಯಕ ಮುಗಿಸಿ ವಿಶ್ರಾಂತಿಗೆ ಕುಳಿತು ಧ್ಯಾನಿಸಿದ ಜಲಗಾರನೆದುರು ಪ್ರತ್ಯಕ್ಷವಾಗುವ ಶಿವ - ಚಂದ್ರನಿಲ್ಲದ, ಜಡೆಯಲ್ಲಿದ, ಗಂಗೆಯಿಲ್ಲದ, ವಿಭೂತಿಯಿಲ್ಲದ, ರುದ್ರಾಕ್ಷಿಯಿಲ್ಲದ, ಕೈಯಲ್ಲಿ ತ್ರಿಶೂಲ ಡಮರುಗಗಳಿಲ್ಲದ ಶಿವನನ್ನು ಜಲಗಾರ ಪ್ರಶ್ನಿಸುವುದು - ಪ್ರಶ್ನಿಸಿದ ಜಲಗಾರನಿಗೆ ತಾನು ಶಾಸ್ತ್ರಿಗಳ, ಪಂಡಿತರ, ಕವಿಗಳ ಶಿವನಲ್ಲ – ಶೂದ್ರನಾಗಿದ್ದ, ಅಸ್ಪೃಶ್ಯನಾಗಿದ್ದ ತನನ್ನು ಜನಿವಾರಧಾರಿ ಶಿವನಾಗಿ ಪರಿವರ್ತಿಸಿದ್ದನ್ನು ವಿವರಿಸುವ ಶಿವ - ಲೋಕದ ತುಂಬಾ ತುಂಬಿರುವ ಕಸವನ್ನೆಲ್ಲ | 4 |

| ಉ-ವಿಭಾಗ | | |
|---|---|---|
| XIV | | 1X4=4 |
| 45 | ನ ಜ ಭ ಜ ಜ ಜ ರ<br>UUU U _ U _ U U U_ U U _ U U _ U_ U _<br>ಎನಗ\|ನುಕೂಲ\|ಮಕ್ಕೆ ಗು\|ಣವರ್ಮ\|ನ ಜಾಣ್ಣು\|ಡಿ ಪಂಪ\|ನಿಂಪುಪೋ\| | |
| | ಪ್ರಸ್ತಾರ | 2 |
| | ಗಣ ವಿಂಗಡಣೆ | 1 |
| | ಛಂದಸ್ಸಿನ ಹೆಸರು – ಚಂಪಕಮಾಲಾವೃತ್ತ | 1 |
| 46 | UU UU _ U U UU _ _U U<br>ಕುಣಿವುತೆ\| ಕೂಗುತೆ\| ನಲವಿಂ\| ಬಾರಿಸಿ \|<br>U U UU UUUU U U _ _U U<br>ಮಣಿವುತೆ\| ತಣಿವುತೆ\| ಮುದದಿಂ\| ಬಾರಿಸಿ\| | |
| | ಪ್ರಸ್ತಾರ | 2 |
| | ಗಣವಿಂಗಡಣೆ | 1 |
| | ಛಂದಸ್ಸಿನ ಹೆಸರು – ಮಂದಾನಿಲ ರಗಳೆ | 1 |
| XV | | 1X4=4 |
| 47 | ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಪುನರಾವರ್ತನೆಯಾದರೆ ಅದು ವೃತ್ತ್ಯಾನುಪ್ರಾಸ | 2 |
| | ಪ್ರಸ್ತುತ ಪದ್ಯಭಾಗದಲ್ಲಿ 'ಲ್ಲ' ಎಂಬ ವ್ಯಂಜನವು ಪುನರಾವರ್ತನೆಯಾಗಿದೆ. ಆದ್ದರಿಂದ ಇದು ವೃತ್ತ್ಯಾನುಪ್ರಾಸ | 2 |
| 48 | ಉಪಮೇಯ – ಸುರಕಾಮಿನಿ, ಉಪಮಾನ – ಸೌದಾಮಿನಿ | 1 |
| | ಉಪಮಾವಾಚಕ – ವೊಲ್, ಸಮಾನಧರ್ಮ - ಅದೃಶ್ಯವಾಯಿತು | 1 |
| | ಸುರಕಾಮಿನಿಯ ಅದೃಶ್ಯವನ್ನು ಇಲ್ಲಿ ಸೌದಾಮಿನಿಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರ | 2 |